CC NO. PW CW

30ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿ, ಬೆಂಗಳೂರು.
ಬೆಂಗಳೂರು ನಗರ.

ಸಿ.ಸಿ. ನಂಃ14536/2018 ಪ್ರಾಸಾ-2 ಚಾಸಾ-6

| | |
|---|---|
| ಸಾಕ್ಷಿಯ ಹೆಸರು | ಶಿವಮೂರ್ತಿ |
| ತಂದೆಯ/ಗಂಡನ ಹೆಸರು | ರಾಜ ಭೋವಿ |
| ವಯಸ್ಸು | 40 ವರ್ಷ |
| ಉದ್ಯೋಗ | ಹೆಚ್ ಸಿ 8171, ಪುಟ್ಟೇನಹಳ್ಳಿ ಪೋಲಿಸ್ ಠಾಣೆ |
| ವಿಳಾಸ | ಬೆಂಗಳೂರು. |

ಸಾಕ್ಷಿಯನ್ನು ಈ ದಿವಸ ದಿನಾಂಕಃ08-03-2022 ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು.

ಮುಖ್ಯ ವಿಚಾರಣೆಃ ಹಿರಿಯ ಸ.ಸ.ಅ. ರವರಿಂದ.

ನಾನು 2017 ರಿಂದ ಇಲ್ಲಿಯವರೆಗೆ ಹೆಚ್ ಸಿ ಆಗಿ ಪುಟ್ಟೇನಹಳ್ಳಿ ಪೋಲಿಸ್ ಠಾಣೆಯಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ.

ದಿಃ17-3-2017 ರಂದು ಚಾಸಾ-19 ಇವರು ನನ್ನನ್ನು, ಚಾಸಾ-12, ಚಾಸಾ-13, ಚಾಸಾ-15, ಚಾಸಾ-16 ಇವರುಗಳನ್ನು ಆರೋಪಿಯ ಪತ್ತೆಗಾಗಿ ನೇಮಿಸಿದ್ದರು. ನಾವೆಲ್ಲರೂ ಖಚಿತ ಮಾಹಿತಿ ಪಡೆದು, ಕೆಂಗೇರಿಯ ಮಣಪ್ಪುರಂ ಗೋಲ್ಡ್ ಫೈನಾನ್ಸ್ ಬಳಿ ಅನುಮಾನಸ್ಪದವಾಗಿ ಓಡಾಡುತ್ತಿದ್ದ ವ್ಯಕ್ತಿಗಳನ್ನು ಸಂಜೆ 6-00 ಗಂಟೆಗೆ ಹಿಡಿದೆವು. ಆತನನ್ನು ವಿಚಾರಿಸಿದಾಗ ಸಂತೋಷ್ ಅಲಿಯಾಸ್ ಎಮ್ಮೆ ಎಂದು ಹೇಳಿದನು. ಆತನನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ಸಾಕ್ಷಿದಾರರು ಸಂತೋಷ್ ಅಲಿಯಾಸ್ ಎಮ್ಮೆ ಅಂತ ಗುರುತಿಸಿರುತ್ತಾರೆ. ಆರೋಪಿಯ ಜೊತೆಗೆ ಸಾಗರ್ ಅಂತ ಇನ್ನೊಬ್ಬ ಇದ್ದನು. ಇವರಿಬ್ಬರ ಜೊತೆಗೆ ಇನ್ನೊಬ್ಬ ಓಡಿ ಹೋಗಿದ್ದು, ಆತನ ಬಗ್ಗೆ ವಿಚಾರಿಸಿದಾಗ ಅಜಯ್

ಅಲಿಯಾಸ್ ಮನು ಅಂತ ತಿಳಿಯಿತು. ಆತನನ್ನು ನೋಡಿದರೆ ಗುರುತಿಸುತ್ತೇನೆ. ಆತನ ವಿರುದ್ಧ ಪ್ರಕರಣವನ್ನು ಪ್ರತ್ಯೇಕಗೊಳಿಸಲಾಗಿದೆ. ಚಾಸಾ–12 ಇವರು ವರದಿಯನ್ನು ಕೊಟ್ಟಿರುತ್ತಾರೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಆ ವರದಿಯನ್ನು ನಿಪಿ–1 ಎಂದು ಗುರುತಿಸಲಾಯಿತು.

<u>ಪಾಟಿ ಸವಾಲುಃ ಆರೋಪಿ ಪರ ಶ್ರೀ ವೈ ಎಂ ಆರ್ ವಕೀಲರಿಂದ.</u>

ಆ ಸಮಯದಲ್ಲಿ 1 ನೇ ಆರೋಪಿ ಯಾವ ಬಣ್ಣದ ಬಟ್ಟೆಯನ್ನು ಧರಿಸಿದ್ದ ಅಂತ ಹೇಳಲು ಆಗುವುದಿಲ್ಲ. ಆರೋಪಿಯನ್ನು ಕೆಂಗೇರಿ ಬಳಿ ವಶಕ್ಕೆ ಪಡೆದಿರುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿಯನ್ನು 4 ದಿನದ ಮೊದಲೇ ಅವರ ಮನೆಯಲ್ಲಿ ಬಂಧಿಸಿರುತ್ತೇವೆ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತನ್ನುಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

30ನೇ ಅ.ಮು.ಮ.ದಂ. ಬೆಂಗಳೂರು.